# * ಏಕಶ್ಲೋಕೀ ರಾಮಕೃಷ್ಣ ಸ್ತೋತ್ರ *

ಪ್ರೊ. ಎನ್. ಕೃಷ್ಣಸ್ವಾಮಿ

**ಒಂದೇ ಶ್ಲೋಕದಲ್ಲಿ ಬಹಳಷ್ಟು ಗಹನವಾದ ವಿಷಯಗಳನ್ನು ಸಂಗ್ರಹಿಸಿ ಹೇಳುವುದು ಏಕಶ್ಲೋಕಿಯ ವೈಶಿಷ್ಟ್ಯ. ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರಾದ ಪ್ರೊ. ಎನ್. ಕೃಷ್ಣಸ್ವಾಮಿ ಅವರು ಶ್ರೀರಾಮಕೃಷ್ಣರನ್ನು ಕುರಿತ ಈ ಬಗೆಯ ಕೆಲವು ಶ್ಲೋಕಗಳ ಪರಿಚಯ ಮಾಡಿಕೊಟ್ಟಿರುವರು.**

**ಒಂದೇ** ಒಂದು ಶ್ಲೋಕದಲ್ಲಿ ಒಂದು ಭಾವನೆಯನ್ನು ಸಂಗ್ರಹಪೂರ್ಣವಾಗಿ ಹೇಳುವಂತಹದ್ದು ಏಕಶ್ಲೋಕೀ. ಸಂಸ್ಕೃತದಲ್ಲಿ ಏಕಶ್ಲೋಕಿಗಳು ಬಹು ಪ್ರಭಾವಶಾಲಿಯಾಗಿವೆ. **ಪೂರ್ವಂ ರಾಮ ತಪೋಭಿಗಮನಂ** ಎಂದು ಮೊದಲಾಗಿ **ಏತದ್ಧಿ ರಾಮಾಯಣಂ** ಎಂದು ಕೊನೆಗಾಣುವ ಏಕಶ್ಲೋಕೀ ರಾಮಾಯಣದಂತೆ ಮಹಾಭಾರತ, ಭಗವದ್ಗೀತೆಗಳಿಗೂ ಇರುವ ಏಕಶ್ಲೋಕಿಗಳು ಪ್ರಸಿದ್ಧವಾಗಿವೆ.

ರಾಮಕೃಷ್ಣ ಸಾಹಿತ್ಯದಲ್ಲಿ ಪರಮಹಂಸರನ್ನು ಕುರಿತ ಸ್ತೋತ್ರಗಳೂ, ಗೀತೆಗಳೂ ವಿಪುಲವಾಗಿವೆ; ಈಗಲೂ ರಚನೆ ಯಾಗುತ್ತಿವೆ. ಇವುಗಳಿಗೆ ಕಲಶಪ್ರಾಯವಾದದ್ದು ೧೮೯೮ರಲ್ಲಿ ಸ್ವಾಮಿ ವಿವೇಕಾನಂದರು, ನವಗೋಪಾಲ್ ಘೋಷ್ ಎಂಬ ಭಕ್ತರ ಮನೆಯಲ್ಲಿ ಶ್ರೀರಾಮಕೃಷ್ಣರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವಾಗ ಪೂಜೆಯನ್ನು ಮಾಡುತ್ತ ಸ್ಫೂರ್ತಿಯಿಂದ ಅಲ್ಲೇ ರಚಿಸಿದ ಸ್ತೋತ್ರ:

ಸ್ಥಾಪಕಾಯ ಚ ಧರ್ಮಸ್ಯ ಸರ್ವ-ಧರ್ಮ-ಸ್ವರೂಪಿಣೇ ।
ಅವತಾರ-ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥

ಈ ಪ್ರಣಾಮಮಂತ್ರದ ಮೇಲೆ ಚಿಂತನಪೂರ್ಣವಾದ ವ್ಯಾಖ್ಯಾನಗಳಿವೆ.

ಕೇರಳದ ಕೊಯಿಲಾಂಡಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಒಂದು ರಾಮಕೃಷ್ಣ ದೇವಾಲಯ ಇದೆ. ಅದರ ದ್ವಾರದ ಮೇಲೆ ಇನ್ನೊಂದು ಚಿಕ್ಕ ರಾಮಕೃಷ್ಣ ಸ್ತೋತ್ರವಿದೆ:

ತ್ರೇತಾಯಾಂ ರಾಮರೂಪಾಯ ದ್ವಾಪರೇ ಕೃಷ್ಣಮೂರ್ತಯೇ।
ಕಲೌ ಪೂರ್ಣಾವತಾರಾಯ ರಾಮಕೃಷ್ಣಾಯ ತೇ ನಮಃ ।

ಕೇರಳದಲ್ಲಿ ಅತಿ ಪ್ರಸಿದ್ಧರೂ, ಗೌರವಾನ್ವಿತರೂ ಆಗಿರುವ, ಅನೇಕ ಶಾಸ್ತ್ರಗ್ರಂಥಗಳನ್ನು ರಚಿಸಿರುವ, ಸ್ವಾಮಿ ಸಿದ್ಧಿನಾಥಾ ನಂದಜಿ ಅವರನ್ನು ಈ ಸುಂದರವಾದ ಶ್ಲೋಕದ ಕವಿ ಯಾರು ಎಂದು ಕೇಳಿದಾಗ ಅವರು ಹೇಳಿದರು, "ಸ್ವಾಮಿ ತ್ಯಾಗೀಶಾನಂದರು ತ್ರಿಶೂರಿನಲ್ಲಿ ವಿವೇಕಾನಂದರ ಹೆಸರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿ ಅದರ ಮುಖ್ಯೋಪಾಧ್ಯಾಯರಾಗಿ ಅದನ್ನು ನಡೆಸುತ್ತಿದ್ದಾಗ ಈ ಶ್ಲೋಕವು ಪ್ರಚಲಿತವಾಯಿತು. ಸ್ವಾಮಿ ತ್ಯಾಗೀಶಾನಂದಜಿ ಇದನ್ನು ಬರೆದರೆಂದು ನಂಬಲಾಗಿದೆ." ಇದೂ ಒಂದು ಸುಂದರವಾದ ಏಕಶ್ಲೋಕೀ ರಾಮಕೃಷ್ಣ ಸ್ತೋತ್ರ. ಇದರ ಅರ್ಥ—'ತ್ರೇತಾಯುಗದಲ್ಲಿ ಶ್ರೀರಾಮನಾಗಿ ಅವತರಿಸಿದ, ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿ ಅವತರಿಸಿದ, ಕಲಿಯುಗದಲ್ಲಿ ಪೂರ್ಣಾವತಾರನಾಗಿ ಅವತರಿಸಿರುವ ಶ್ರೀರಾಮಕೃಷ್ಣರಿಗೆ ಪ್ರಣಾಮಗಳು."

ಸೆಪ್ಟೆಂಬರ್ ೨೦೦೧ರ 'ಪ್ರಬುದ್ಧಭಾರತ'ದಲ್ಲಿ ಇನ್ನೊಂದು ಏಕಶ್ಲೋಕೀ ರಾಮಕೃಷ್ಣ ಸ್ತೋತ್ರದ ಪ್ರಸ್ತಾಪವಿದೆ. Reminiscences of Swami Vishuddhananda (ಸ್ವಾಮಿ ವಿಶುದ್ಧಾನಂದರ ಸ್ಮೃತಿಕಥನ) ಎಂಬ ಲೇಖನದಲ್ಲಿ ಸ್ವಾಮಿ ಗೋಕುಲಾನಂದರು (ದೆಹಲಿ ರಾಮಕೃಷ್ಣ ಮಿಷನ್ನಿನ ಈಗಿನ ಮುಖ್ಯಸ್ಥರು) ಈ ಸ್ತೋತ್ರವನ್ನು ಉಲ್ಲೇಖಿಸಿದ್ದಾರೆ. ತಮ್ಮ ಲೇಖನದಲ್ಲಿ ಸ್ವಾಮಿ ಗೋಕುಲಾನಂದರು ಬರೆಯುತ್ತಾರೆ: "ಒಂದು ಸಲ ಅವರು ನನ್ನನ್ನು ಕೇಳಿದರು: 'ನೀನು ದಿನಚರಿ ಇಟ್ಟುಕೊಂಡಿದ್ದೀಯಾ?' ನಾನು 'ಹೌದು' ಎಂದು ಹೇಳುತ್ತಾ 'ವಿವಿಧ ದಿನಗಳಲ್ಲಿ ನಿಮ್ಮೊಡನೆ ನಡೆಸಿದ ಸಂಭಾಷಣೆಗಳನ್ನು ನಾನು ಬರೆದುಕೊಂಡೂ ಇದ್ದೇನೆ. ನೀವು ಹೇಳಿದ ಒಂದು ಶ್ಲೋಕವನ್ನೂ ನಾನು ಬರೆದುಕೊಂಡಿದ್ದೇನೆ' ಎಂದೆ."

ರಾಮಕೃಷ್ಣ ರಾಮಕೃಷ್ಣ ರಾಮಕೃಷ್ಣ ಪಾಹಿ ಮಾಂ ।
ರಾಮಕೃಷ್ಣ ರಾಮಕೃಷ್ಣ ರಾಮಕೃಷ್ಣ ರಕ್ಷ ಮಾಂ ॥

ಸ್ವಾಮಿ ವಿಶುದ್ಧಾನಂದರು ನಗುತ್ತಾ ಹೇಳಿದರು, "ಈ ಶ್ಲೋಕವನ್ನು ನಾನು ಬೇಲೂರು ಮಠದ ಕ್ಷೌರಿಕನಿಗೂ ಹೇಳಿ ಕೊಟ್ಟಿದ್ದೇನೆ." ಸ್ವಾಮಿ ವಿಶುದ್ಧಾನಂದರ ಶ್ಲೋಕವೂ ಈ ಮೇಲೆ ಹೇಳಿರುವ ಎರಡು ಶ್ಲೋಕಗಳ ಹಾಗೆಯೇ ಅನುಷ್ಟುಪ್ ಛಂದಸ್ಸಿನಲ್ಲಿದೆ. ಬಹು ಸರಳವಾಗಿದೆ, ಹೇಳುತ್ತಿದ್ದ ಹಾಗೆಯೇ ಎಲ್ಲರಿಗೂ ಅರ್ಥವಾಗುತ್ತದೆ. ಸ್ವಾಮಿ ವಿಶುದ್ಧಾನಂದರು ಹೇಳಿರುವ ಈ ಸರಳ ಸುಂದರ ಶ್ಲೋಕ ಹಾಡಲು, ಮನನ ಮಾಡಲು ಅರ್ಹವಾಗಿದೆ. ✪

ಭಕ್ತಹಾರ್ದತಮೋ ಭೇದಿ ದಿವ್ಯಜ್ಯೋತಿಃ ಸ್ವರೂಪಿಣೇ ।
ಪ್ರಪನ್ನತ್ರಾಣದೀಕ್ಷಾಯ ರಾಮಕೃಷ್ಣಾಯ ತೇ ನಮಃ ॥

**ಭಕ್ತರ ಹೃದಯದಲ್ಲಿರುವ ತಮಸ್ಸನ್ನು ನಿವಾರಣೆ ಮಾಡುವ ದಿವ್ಯಜ್ಯೋತಿಸ್ವರೂಪರಾದ, ಶರಣಾಗತರನ್ನು ಕಾಪಾಡುವ ವ್ರತವನ್ನು ಕೈಗೊಂಡಿರುವ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.**